Order copy of R.R.No AGNSL.132.doc

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)


1) ದೂರವಾಣಿ: (08352) 276838 ಅ.ಅ.(ವಿ)
2) ಫ್ಯಾಕ್ಸ್: (08352) 277838
3) ಇ-ಮೇಲ್: seebjp.hescom@gmail.com
4) ಇ-ಮೇಲ್: seehescombjp@yahoo.co.in

ಅಧೀಕ್ಷಕ ಅಭಿಯಂತರರು (ವಿ)
ಕಾರ್ಯ ಮತ್ತು ಪಾಲನೆ ವೃತ್ತ
ಹು.ವಿ.ಸ.ಕಂ.ನಿ. ವಿಜಯಪೂರ
ರವರ ಕಛೇರಿ,


ಸಂಖ್ಯೆ: ಬಿಜೆಪಿ/ಅಅ(ವಿ)/ಉಲೆನಿ/ಹಿಸ(ಕಂ)/19-20/ 6161-68 ದಿನಾಂಕ: 31 OCT 2019

**:ಪೀಠಿಕೆ:**

1) ದಿನಾಂಕ: 11.07.2019ರಂದು ಜರುಗಿದ ಗ್ರಾಹಕರ ಕುಂದು ಕೊರತೆ ನಿವಾರಣೆ ವೇದಿಕೆ ವಿಜಯಪೂರ ಜಿಲ್ಲೆ ವಿಜಯಪೂರದ ಸಭೆಯಲ್ಲಿ ಶ್ರೀ ಮದಪ್ಪಾ ಸೋಮಣ್ಣಾ ಗೋಡೆಕಾರ ಸಾ//ಅಗಸನಾಳ ತಾ//ಇಂಡಿ/ ಜಿ//ವಿಜಯಪೂರ ಎಂಬುವರು ತಮ್ಮ ತಂದೆಯವರಾದ ಶ್ರೀ.ಸೋಮಣ್ಣಾ ಶಿವಪ್ಪ ಗೋಡೆಕಾರ ಇವರ ಹೆಸರಿನಲ್ಲಿದ್ದ ಹಿಟ್ಟಿನ ಗಿರಣಿಯ ಸ್ಥಾವರ ಸಂಖ್ಯೆ AGSNMP-132ರ ರೂ.11492/-(D2) ಮತ್ತು ರೂ.4900/-(D11)ಗಳನ್ನು ಮರಳಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಕಾರ್ಯ ಮತ್ತು ಪಾಲನೆ ಉಪವಿಭಾಗ ಹು.ವಿ.ಸ.ಕಂ.ನಿ. ಚಡಚಣರವರಿಗೆ ವಿಳಾಸಿಸಿ ವಿನಂತಿ ಅರ್ಜಿ ನೀಡಿದ್ದು ಇನ್ನೂವರೆಗೆ ಸದರಿ ಮೊತ್ತ ತನ್ನ ಖಾತೆಗೆ ಜಮೆ ಆಗಿರುವುದಿಲ್ಲ ಎಂದು ದೂರಿ ದೂರು ಅರ್ಜಿಯನ್ನು ಸಲ್ಲಿಸಿದರು.

2) ಪ್ರಸ್ತುತ ಪ್ರಕರಣದ ಕುರಿತು ಸಮಗ್ರ ವರದಿಯನ್ನು ನೀಡುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಕಾರ್ಯ ಮತ್ತು ಪಾಲನೆ ಉಪವಿಭಾಗ ಹು.ವಿ.ಸ.ಕಂ.ನಿ. ಚಡಚಣರವರಿಗೆ ಈ ಕಚೇರಿ ಪತ್ರ ಸಂಖ್ಯೆ ಬಿಜೆಪಿ/ಅಅ(ವಿ)/ಉಲೆನಿ/ಹಿಸ(ಕಂ)/19-20/3050-59/ದಿನಾಂಕ:12.07.2019ರಡಿ ಪತ್ರ ಬರೆದು ಸೂಚಿಸಲಾಗಿತ್ತು.

3) ದಿನಾಂಕ: 04.09.2019ರಂದು ಜರುಗಿದ ಗ್ರಾಹಕರ ಕುಂದು ಕೊರತೆ ನಿವಾರಣೆ ವೇದಿಕೆಯ ವಿಚಾರಣೆ ಸಭೆಗೆ ಹಾಜರಾಗಿದ್ದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಕಾರ್ಯ ಮತ್ತು ಪಾಲನೆ ಉಪವಿಭಾಗ ಹು.ವಿ.ಸ.ಕಂ.ನಿ. ಚಡಚಣರವರು ಪ್ರಕರಣದ ಕುರಿತು ಈ ಕೆಳಗಿನಂತೆ ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

ಸ್ಥಾವರ ಸಂಖ್ಯೆ AGSNMP-132ರ ಗ್ರಾಹಕರ ಪ್ರತಿನಿಧಿಯಾದ ಶ್ರೀ.ಎಂ.ಎಸ್.ಗೋಡೆಕಾರವರು ಸ್ಥಾವರ ಪ್ರಸ್ತುತ ಚಾಲ್ತಿಯಲ್ಲಿ ಇರುವದಿಲ್ಲ. ಠೇವಣಿ ಹಣ ಮರಳಿಸುವಂತೆ ತಮ್ಮ ಲಿಖಿತ ಪತ್ರ ನೀಡಿರುತ್ತಾರೆ. ಆದರೆ ಅವರು ವಾರಸುದಾರರ ಕುರಿತು ಯಾವುದೇ ದಾಖಲೆ ನೀಡಿರುವುದಿಲ್ಲ ಸೂಕ್ತ ದಾಖಲೆ ಒದಗಿಸುವಂತೆ ಶ್ರೀ,ಗೋಡೆಕಾರರವರಿಗೆ ಸಾಕಷ್ಟು ಬಾರಿ ಮೌಖಿಕವಾಗಿ ನಾನು ಮತ್ತು ನಮ್ಮ ಶಾಖಾಧಿಕಾರಿಯವರು ವ್ಯೆಯಕ್ತಿಕವಾಗಿ ತಿಳಿಸಿರುತ್ತೇವೆ. ಆದರೆ ಸದರಿಯವರು ಇಲ್ಲಿಯವರೆಗೆ ನೀಡಿರುವುದಿಲ್ಲ.

4) ಸದರಿ ವಿಚಾರಣಾ ಸಭೆಯಲ್ಲಿ ಹಾಜರಿದ್ದ ಶ್ರೀ.ಮದಪ್ಪ ಸೋಮಣ್ಣ ಗೋಡೆಕಾರರವರು ಕೆ.ಈ.ಆರ್.ಸಿ. ನಿಯಮಾನುಸಾರ ಮರು ಪಾವತಿ ಕಾರ್ಯಕ್ಕೆ ಅಗತ್ಯ ಇರುವ ಮರಣ ಪ್ರಮಾಣ ಪತ್ರ, ವಾರಸಾ ಪ್ರಮಾಣ ಪತ್ರ, ಖಾತೆ ಉತಾರೆ, ವಾರಸುದಾರರ ಒಪ್ಪಿಗೆ ಪ್ರಮಾಣ ಪತ್ರಗಳನ್ನು ಮತ್ತು ಮರು ಪಾವತಿ ಪಡೆಯಲು ನಿಗದಿಪಡಿಸಿದ ಅರ್ಜಿ ಮತ್ತು ಬ್ಯಾಂಕ ಖಾತೆ ವಿವರ ಮತ್ತು ಇನ್ನಿತರ ಪೂರಕ ದಾಖಲೆಗಳನ್ನು ಪೂರೈಸುವ ಕುರಿತು ತಿಳಿಯಪಡಿಸಲಾಯಿತು. ಅದಕ್ಕೆ ಒಪ್ಪಿದ ಗ್ರಾಹಕರು 15 ದಿನಗಳಲ್ಲಿ ಎಲ್ಲ ದಾಖಲೆಗಳನ್ನು ಚಡಚಣ ಉಪವಿಭಾಗಕ್ಕೆ ಸಲ್ಲಿಸುವುದಾಗಿ ಮೌಖಿಕ ಒಪ್ಪಿಗೆಯನ್ನು ಸೂಚಿಸಿರುತ್ತಾರೆ. ಶ್ರೀ ಮದಪ್ಪ ಸೋಮಣ್ಣ ಗೋಡೆಕಾರರವರು ಮೇಲಿನ ಎಲ್ಲ ದಾಖಲೆಗಳನ್ನು ಮತ್ತು ಇನ್ನಿತರೆ ಪೂರಕ ದಾಖಲೆಗಳನ್ನು ಸಲ್ಲಿಸಿದ 30 ದಿನಗಳೊಗಾಗಿ ಮರು ಪಾವತಿಯ ಪ್ರಸ್ತಾವನೆಯನ್ನು ವಿಭಾಗೀಯ ಕಚೇರಿಗೆ ಸಲ್ಲಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಕಾರ್ಯ

Scanned By Camera Scanner

ಮತ್ತು ಪಾಲನೆ ಉಪವಿಭಾಗ ಹು.ವಿ.ಸ.ಕಂ.ನಿ. ಚಡಚಣರವರಿಗೆ ಸೂಚಿಸಲಾಯಿತು ಮತ್ತು ಅದಕ್ಕೆ ಅವರು ಒಪ್ಪಿಗೆಯನ್ನು ನೀಡಿದ್ದು ಇರುತ್ತದೆ.

" ಕಾರಣ ಈ ಆದೇಶ"

## ಆದೇಶ

ಪೀಠಿಕೆಯಲ್ಲಿ ಪ್ರಸ್ತಾಪಿಸಿದಂತೆ ಶ್ರೀ. ಮದಪ್ಪಾ ಸೋಮಣ್ಣಾ ಗೋದೇಕಾರ ಸಾ//ಅಗಸನಾಳ ತಾ//ಇಂಡಿ ಜಿ//ವಿಜಯಪೂರರವರು ತಮ್ಮ ವಾರಸುದಾರಿಕೆಯನ್ನು ಬಾಧಿತ ಪಡಿಸುವ ಇನ್ನಿತರ ವಾರಸುದಾರರ ಒಪ್ಪಿಗೆ ಪತ್ರ ಮತ್ತು ಮರು ಪಾವತಿಗೆ ಅವಶ್ಯವಿರುವ ಎಲ್ಲಾ ಸಮರ್ಪಕ ದಾಖಲೆಗಳನ್ನು ಚಡಚಣ ಉಪವಿಭಾಗಕ್ಕೆ ಸಲ್ಲಿಸಿದ ನಂತರದ 30 ದಿನಗಳೊಳಗಾಗಿ ಪ್ರಸ್ತುತ ಪ್ರಕರಣದ ಕುರಿತು ಸಮಗ್ರ ಪರಿಶೀಲನೆ ಕೈಗೊಂಡ ನಿಯಮಾವಳಿಗಳನ್ವಯ ಮರು ಪಾವತಿ ಪ್ರಸ್ತಾವನೆಯನ್ನು ಸೂಕ್ತ ದಾಖಲೆಗಳೊಂದಿಗೆ ಇಂಡಿ ವಿಭಾಗಕ್ಕೆ ಸಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು(ವಿ) ಕಾರ್ಯ ಮತ್ತು ಪಾಲನೆ ಉಪವಿಭಾಗ ಹು.ವಿ.ಸ.ಕಂ.ನಿ. ಚಡಚಣರವರಿಗೆ ಮತ್ತು ಮರು ಪಾವತಿ ಪ್ರಸ್ತಾವನೆ ಸ್ವೀಕರಿಸಿದ ದಿನದಿಂದ 30 ದಿನಗಳಲ್ಲಿ ನಿಯಮಾವಳಿ ಅನುಸಾರ ಅರ್ಹ ವಾರಸುದಾರರಿಗೆ ಮರುಪಾವತಿಗೆ ಅವಕಾಶವಿದ್ದಲ್ಲಿ, ಮರುಪಾವತಿಸುವ ವ್ಯವಸ್ಥೆ ಮಾಡಲು ಕಾರ್ಯನಿರ್ವಾಹಕ ಇಂಜನೀಯರರು(ವಿ) ಕಾರ್ಯ ಮತ್ತು ಪಾಲನೆ ವಿಭಾಗ ಹು.ವಿ.ಸ.ಕಂ.ನಿ. ಇಂಡಿರವರಿಗೆ ಸೂಚಿಸಿ ಆದೇಶ ಹೊರಡಿಸಲಾಗಿದೆ.

| | | |
|---|---|---|
| ಸದಸ್ಯರು | ಸದಸ್ಯರು | ಅಧ್ಯಕ್ಷರು |
| ಶ್ರೀ ಎಸ್.ವಿ.ಸಿಂಧೂರ | ಶ್ರೀ ಎಸ್.ಎಸ್.ಬಿರಾದಾರ | ಶ್ರೀ.ಕೆ.ಪಿ.ಹಿರೇಮಠ |
| ಉಪಲೆಕ್ಕನಿಯಂತ್ರಣಾಧಿಕಾರಿ | ಬಿರಾದಾರ ಕೆಮಿಕಲ್ಸ್ | ಅಧೀಕ್ಷಕ ಅಭಿಯಂತರರು (ವಿ) |
| ಗ್ರಾ.ಕುಂ.ಕೊ.ನಿ.ವೇದಿಕೆ | ಗ್ರಾ.ಕುಂ.ಕೊ.ನಿ.ವೇದಿಕೆ | ಗ್ರಾ.ಕುಂ.ಕೊ.ನಿ.ವೇದಿಕೆ |
| ವಿಜಯಪೂರ ವೃತ್ತ | ವಿಜಯಪೂರ ವೃತ್ತ | ವಿಜಯಪೂರ ವೃತ್ತ |

ಪ್ರತಿಯನ್ನು ಗೌರವಪೂರ್ವಕ ಮಾಹಿತಿಗೆ ಸಲ್ಲಿಸಿದೆ.

1) ಮಾನ್ಯ ಮುಖ್ಯ ಇಂಜನೀಯರರು(ವಿ) ಕಾರ್ಯ ಮತ್ತು ಪಾಲನೆ ವಲಯ ಹು.ವಿ.ಸ.ಕಂ.ನಿ. ಬೆಳಗಾಂವ.

ಪ್ರತಿ ಅಭಿವಂದನೆಗಳೊಂದಿಗೆ

2) ನಿಯಂತ್ರಣಾಧಿಕಾರಿಗಳು (ಕಂ&ಲೆ) ನಿಗಮ ಕಚೇರಿ ಪಿ.ಬಿ.ರೋಡ ನವನಗರ ಹು.ವಿ.ಸ.ಕಂ.ನಿ. ಹುಬ್ಬಳ್ಳಿ
3) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂಅ) ನಿಗಮ ಕಚೇರಿ ಪಿ.ಬಿ.ರೋಡ ನವನಗರ ಹೆಸ್ಕಾಂ ಹುಬ್ಬಳ್ಳಿ
4) ಪ್ರತಿ ಆಪ್ತ ಕಾರ್ಯದರ್ಶಿಗಳು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂತ್ರಿಕ)/ಮಾನ್ಯ ಆರ್ಥಿಕ ಸಲಹೆಗಾರರು ನಿಗಮ ಕಚೇರಿ ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಇದನ್ನು ಮಾನ್ಯರ ಗಮನಕ್ಕೆ ತರಲು.

ಪ್ರತಿ ಮಾಹಿತಿಗಾಗಿ

5) ಶ್ರೀ ಸಿದ್ದನಗೌಡ ಶಿವನಗೌಡ. ಬಿರಾದಾರ ಪ್ರೊ//ಬಿರಾದಾರ ಕೆಮಿಕಲ್ಸ್ ಪ್ಲಾಟ ನಂ.1 ಪ್ರೋಗ್ಸ ಪಾರ್ಕ ಸಂಖ್ಯೆ: 2 ಇಂಡಸ್ಟ್ರೀಯಲ್ ಎಸ್ಟೇಟ್ ಸ್ಟೇಷನ ಬ್ಯಾಕ ರೋಡ ವಿಜಯಪೂರ–586 104. ರವರ ಮಾಹಿತಿಗಾಗಿ.
6) ಕಾರ್ಯನಿರ್ವಾಹಕ ಅಭಿಯಂತರರು(ವಿ) (Regulatory Affairs) ನಿಗಮ ಕಚೇರಿ ಪಿ.ಬಿ.ರೋಡ ನವನಗರ ಹು.ವಿ.ಸ.ಕಂ.ನಿ. ಹುಬ್ಬಳ್ಳಿ.
7) ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು(ವಿ) ಕಾರ್ಯ ಮತ್ತು ಪಾಲನೆ ಉಪವಿಭಾಗ ಹು.ವಿ.ಸ.ಕಂ.ನಿ. ಚಡಚಣ.
9) ಶ್ರೀ.ಎಂ.ಎಸ್.ಗೋದೇಕಾರ ಸಾ//ಅಗಸನಾಳ ತಾ//ಇಂಡಿ ಜಿ// ವಿಜಯಪೂರರವರ ಮಾಹಿತಿಗಾಗಿ. ದೂರವಾಣಿ ಸಂಖ್ಯೆ 8317484282
10) ಪ್ರತಿ ಪ್ರಧಾನ ಕಡತಕ್ಕೆ.

2018-19

D:\My Document Filles\Assistant-2 (Rev)\CGRF\CGRF Procedings Order-16.01.2018.doc

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನೆ ವೃತ್ತ ಕಛೇರಿ, ವಿಜಯಪುರ
Tel:08352-276838, Tel: 08352277838

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele)
O & M Circle, HESCOM Vijaypur,
E-mail ID: seebjp.hescom@gmail.com

Corporate Identity Number(CIN): U31401KA2002SGC030437

## ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಹು.ವಿ.ಸ.ಕಂ.ನಿ., ವಿಜಯಪೂರ.

ಹಾಜರಿದ್ದವರು:

1) ಶ್ರೀ. ಜಿ.ಬಿ.ಹಾಲವರ,
ಅಧೀಕ್ಷಕ ಅಭಿಯಂತರರು (ವಿ.) ಹಾಗೂ ಅಧ್ಯಕ್ಷರು
2) ಶ್ರೀ. ಎಸ್. ಎ. ಸಿಂಧೂರ,
ಉಪ ಲೆಕ್ಕನಿಯಂತ್ರಣಾಧಿಕಾರಿಗಳು ಹಾಗೂ ಸದಸ್ಯರು
3) ಶ್ರೀ. ಎಸ್. ಎಸ್. ಬಿರಾದಾರ,
ಸದಸ್ಯರು

ಪ್ರಕರಣ ಸಂಖ್ಯೆ: **01/2018**

ಶ್ರೀ. ಎ. ಜಿ. ಮಲ್ಲಿಕಾರ್ಜುನಮಠ,
ಮುನಿಶ್ವರ ನಗರ ಸಿಂದಗಿ ರಸ್ತೆ, ವಿಜಯಪೂರ
(ಶ್ರೀ ಜಿ. ಎ. ಮಲ್ಲಿಕಾರ್ಜುನಮಠರವರ ಪರವಾಗಿ) :.............................. ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ),
ಕಾರ್ಯ ಮತ್ತು ಪಾಲನೆ ಶಹರ ಉಪವಿಭಾಗ-II
ಹು.ವಿ.ಸ.ಕಂ.ನಿ., ವಿಜಯಪೂರ. :.............................. ಪ್ರತಿವಾದಿ.

i) ಶ್ರೀ. ಎ. ಜಿ. ಮಲ್ಲಿಕಾರ್ಜುನಮಠ, ಮುನಿಶ್ವರ ನಗರ ಸಿಂದಗಿ ರಸ್ತೆ, ವಿಜಯಪೂರ (ಶ್ರೀ ಜಿ. ಎ. ಮಲ್ಲಿಕಾರ್ಜುನಮಠರವರ ಪರವಾಗಿ) ರವರು KERC (ಗ್ರಾಹಕರ ಕುಂದು ಕೊರತೆ ನಿವಾರಣೆ ವೇದಿಕೆ ಮತ್ತು ಓಂಬಡ್ಸಮನ್) ನಿಬಂಧನೆಗಳು-2004 ರಡಿಯಲ್ಲಿ ಒದಗಿಸಿದ ಅವಕಾಶಗಳಡಿಯಲ್ಲಿ ತಮ್ಮ ದೂರನ್ನು ವೇದಿಕೆಗೆ ಸಲ್ಲಿಸಿದವರು.

ii) <u>ಪ್ರಕರಣದ ಸಾರಾಂಶ:</u>

ಅರ್ಜಿದಾರ ಸ್ಥಾವರ ಸಂಖ್ಯೆ 222066, ಗ್ರಾಹಕರಾದ ಶ್ರೀ. ಎ. ಜಿ. ಮಲ್ಲಿಕಾರ್ಜುನಮಠ ರವರು ಶಹರ ಉಪವಿಭಾಗ-1 ಹು.ವಿ.ಸ.ಕಂ.ನಿ., ವಿಜಯಪೂರದಿಂದ ಜಾರಿಗೊಳಿಸಿದ ಬಿಲ್ಲಿನ ಮೊತ್ತ ರೂ. 7214/- ರ ಕುರಿತು, ಕಳೆದ 15 ವರ್ಷಗಳ ಹಿಂದೆ ಅವರು ಇದ್ದ ಮನೆಯನ್ನು ದಾನ ರೂಪವಾಗಿ ಕೊಟ್ಟಿದ್ದು, ಸದರಿ ಮನೆಯು ಅವರ ವಡೆತನದಲ್ಲಿ ಇರುವದಿಲ್ಲ ಆದರೆ ನನಗೆ ಈಗ ಬಾಕಿ ರೂ. 7214/- ರಷ್ಟು ಮೊತ್ತದ ಬಿಲ್ಲನ್ನು ಪಾವತಿಸುವಂತೆ ಹೆಸ್ಕಾಂ, ನಗರ ಉಪವಿಭಾಗ-1 ರವರು ತಿಳಿಯ ಪಡಿಸಿದ್ದು ಅನ್ಯಾಯಕಾರಕವಾಗಿರುತ್ತದೆ ಎಂದು ತಿಳಿಸಿ, ಸೂಕ್ತ ವಿಚಾರಣೆ ಮಾಡಲು ತಮ್ಮ ಮನವಿ ಪತ್ರವನ್ನು ವೇದಿಕೆಗೆ ಸಲ್ಲಿಸಿರುತ್ತಾರೆ.

iii) <u>ಗ್ರಾಹಕರ ಬೇಡಿಕೆ:</u>

ಕಳೆದ 15 ವರ್ಷಗಳ ಹಿಂದೆ ಅವರು ಇದ್ದ ಮನೆಯನ್ನು ದಾನ ರೂಪವಾಗಿ ಕೊಟ್ಟಿದ್ದು, ಸದರಿ ಮನೆಯು ಅವರ ವಡೆತನದಲ್ಲಿ ಇರುವದಿಲ್ಲ ಆದರೆ ನನಗೆ ಈಗ ಬಾಕಿ ರೂ. 7214/- ರಷ್ಟು ಮೊತ್ತದ ಬಿಲ್ಲನ್ನು ಪಾವತಿಸುವಂತೆ ನಗರ ಉಪವಿಭಾಗ-1 ರವರು ತಿಳಿಯಪಡಿಸಿದ್ದು ಅನ್ಯಾಯಕಾರಕವಾಗಿರುತ್ತದೆ. ಅದನ್ನು ಸೂಕ್ತ ವಿಚಾರಣೆ ಮಾಡಲು ತಮ್ಮ ಮನವಿ ಪತ್ರವನ್ನು ವೇದಿಕೆಗೆ ಸಲ್ಲಿಸಿರುತ್ತಾರೆ.

Scanned By Camera Scanner

IV) ದಿನಾಂಕ: 20-12-2018 ರಂದು ನಡೆದ ವಿಚಾರಣಾ ಸಭೆಗೆ ಕಂಪನಿಯ ಪರವಾಗಿ ಹಾಜರಾದ ಅಧಿಕಾರಿ ಶ್ರೀ ಆರ್. ಆರ್. ಹಂಡಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ.), ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ-1 ಹೆಸ್ಕಾಂ, ವಿಜಯಪೂರ ರವರು ನೀಡಿರುವ ಲಿಖಿತ ಹೇಳಿಕೆಯ ಸಂಕ್ಷಿಪ್ತ ವಿವರ ಈ ಕೆಳಗಿನಂತಿರುತ್ತದೆ. ಸದರಿ ವಿಚಾರಣೆಗೆ ದೂರುದಾರರು ಗೈರು ಹಾಜರಾಗಿರುತ್ತಾರೆ.

ಶ್ರೀ. ಎ. ಜಿ. ಮಲ್ಲಿಕಾರ್ಜುನಮಠ, ಜೋರಾಪುರ ಪೇಠ ವಿಜಯಪೂರ ಇವರ ಸ್ಥಾವರವನ್ನು ಖುದ್ದಾಗಿ ಪರಿಶೀಲಿಸಿ, ಸ್ಥಳ ಪರಿಶೀಲನಾ ವರದಿಯನ್ನು ಸಲ್ಲಿಸುವಂತೆ ಶಾಖಾಧಿಕಾರಿ, ಶಾಖೆ-1 ವಿಜಯಪೂರರವರಿಗೆ ಸೂಚಿಸಲಾಗಿತ್ತು ಅದರನ್ವಯ ಶಾಖಾಧಿಕಾರಿ-1 ನೀಡಿರುವ ವರದಿಯಲ್ಲಿ ಸದರಿ ಗ್ರಾಹಕರು ಸ್ಥಳದಲ್ಲಿ 'ವಾಸವಿರುವದಿಲ್ಲ, ಸ್ಥಾವರಕ್ಕೆ ಮಾಪಕ ಮತ್ತು ಸೇವಾ ಮಾರ್ಗ ಇರಲಿಲ್ಲ ಸದರಿ ಸ್ಥಾವರ ಇರುವ ಸ್ಥಳವನ್ನು ದೇವಸ್ಥಾನಕ್ಕಾಗಿ ದಾನ ಮಾಡಿದ್ದು, ಅಂದಾಜು 10 ವರ್ಷಗಳಿಂದ ಸ್ಥಾವರ ಬಳಕೆ ಇಲ್ಲದಿರುವುದು ಕಂಡು ಬಂದಿರುತ್ತದೆ ಹಾಗೂ ಸದರಿ ಸ್ಥಾವರವನ್ನು ಶಾಶ್ವತ ವಿದ್ಯುತ್ ನಿಲುಗಡೆ ಮಾಡಲು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ಎಂದು ಲಿಖಿತ ಹೇಳಿಕೆ ನೀಡಿರುತ್ತಾರೆ.

ವಿಚಾರಣಾ ದಿನಾಂಕದಂದು ದೂರುದಾರರು ಗೈರು ಹಾಜರಿದ್ದ ಪ್ರಯುಕ್ತ ದೂರುದಾರರಿಗೆ ಇನ್ನೊಂದು ಅವಕಾಶ ನೀಡಲು ವೇದಿಕೆಯ ಎಲ್ಲ ಸದ್ಯಸರು ತೀರ್ಮಾನ ಕೈಗೊಂಡರು.

ದಿನಾಂಕ: 09-01-2019 ರಂದು ಜರುಗಿದ ವಿಚಾರಣಾ ಸಭೆಗೆ ಮತ್ತೆ ದೂರುದಾರರು ಗೈರು ಹಾಜರಾಗಿರುತ್ತಾರೆ. ಸದರಿ ದಿನದಂದು ವಿಚಾರಣೆಗೆ ಹಾಜರಾದ ಶ್ರೀ ಆರ್. ಆರ್. ಹಂಡಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ.), ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ-1 ಹೆಸ್ಕಾಂ, ವಿಜಯಪೂರರವರು ಮುಂದುವರೆದ ಹೇಳಿಕೆಯಲ್ಲಿ ಗ್ರಾಹಕರು ಸ್ಥಳದಲ್ಲಿ ಇರುವುದಿಲ್ಲ ಹಾಗೂ ದೇವಸ್ಥಾನಕ್ಕಾಗಿ ದಾನ ನೀಡಿ ಅಂದಾಜು 10 ವರ್ಷಗಳಾಯಿತು. ವಿದ್ಯುತ್ ನಿಲುಗಡೆಗೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ಸದರಿ ಸ್ಥಾವರಕ್ಕೆ ಇರುವ ಕಂದಾಯ ಬಾಕಿ ಅನಾವಶ್ಯಕವಾಗಿ Fictitious demand ಆಕರಣೆ ಆಗಿದ್ದು ಇರುತ್ತದೆ. ಆದ್ದರಿಂದ ಸದರಿ ಸ್ಥಾವರಕ್ಕೆ ಇರುವ ಕಂದಾಯ ಬಾಕಿ ರೂ. 7214/- ನ್ನು ಹಿಂಪಡೆಯಲು ವಿನಂತಿಸಿಕೊಳ್ಳಲಾಗಿದೆ ಎಂದು ಲಿಖಿತ ಹೇಳಿಕೆ ನೀಡಿರುತ್ತಾರೆ.

V) <u>ವೇದಿಕೆ ಸದಸ್ಯರುಗಳು ಚರ್ಚಿಸಿ ಕಂಡು ಬಂದ ಅಂಶಗಳು,</u>

ಪ್ರಸ್ತುತ ಪ್ರಕರಣದಲ್ಲಿ ಶಾಖಾಧಿಕಾರಿಯ ವರದಿ ಆದರಿಸಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ.), ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ-1 ಹೆಸ್ಕಾಂ, ವಿಜಯಪೂರರವರು ನೀಡಿರುವ ಹೇಳಿಕೆಯನ್ನು ಪರಿಶೀಲಿಸಿದಾಗ, ಸದರಿ ಗ್ರಾಹಕರು ಸ್ಥಳದಲ್ಲಿ ವಾಸವಿರುವದಿಲ್ಲ ಹಾಗೂ ಸ್ಥಾವರಕ್ಕೆ ಮಾಪಕ ಮತ್ತು ಸೇವಾ ಮಾರ್ಗ ಇರುವದಿಲ್ಲ ಸದರಿ ಸ್ಥಾವರ ಇರುವ ಸ್ಥಳವನ್ನು ದೇವಸ್ಥಾನಕ್ಕಾಗಿ ದಾನ ನೀಡಿದ್ದು, ಅಂದಾಜು 10 ವರ್ಷಗಳಿಂದ ಸ್ಥಾವರ ಬಳಕೆ ಇಲ್ಲದಿರುವುದು ಕಂಡು ಬಂದಿರುತ್ತದೆ. ಅದಲ್ಲದೇ ಸದರಿ ಸ್ಥಾವರಕ್ಕೆ ಇರುವ ಕಂದಾಯ ಬಾಕಿ ಅನಾವಶ್ಯಕವಾಗಿ Fictitious demand ಆಕರಣೆ ಆಗಿದ್ದು ಇರುತ್ತದೆ ಎಂದು ಲಿಖಿತ ಹೇಳಿಕೆ ನೀಡಿರುತ್ತಾರೆ. ಮೇಲಾಗಿ ತಮ್ಮ ಹೇಳಿಕೆಯೊಂದಿಗೆ ಸಲ್ಲಿಸಿರುವ ಸ್ಥಾವರದ ಎಪ್ರೀಲ್-2010 ರಿಂದ ಜೂನ್-2015 ರವರೆಗಿನ consumer history statement ನ್ನು ಪರಿಶೀಲಿಸಿದಾಗ ಕಂಡುಬಂದ ಅಂಶವೇನೆಂದರೆ, ಸ್ಥಾವರಕ್ಕೆ ಎಪ್ರೀಲ್-2010 ರ ಪ್ರಾರಂಭದಲ್ಲಿ ಯಾವುದೇ ಬಾಕಿ ಹೊಂದಿರುವದಿಲ್ಲ. ಮಾಪಕದ ಅಂತಿಮ ಗಣಾಂಕ 686 ಇದ್ದು ಜೂನ್-2015 ರವರೆಗೆ ಮಾಪಕದ ಗಣಾಂಕದಲ್ಲಿ ಯಾವುದೇ ಬದಲಾವಣೆ (ವಿದ್ಯುತ್ ಬಳಕೆ) ಇರುವದಿಲ್ಲ. ಕೇವಲ ನಿಗದಿತ ಶುಲ್ಕ ಆಕರಣೆ ಮಾಡುತ್ತ ಬಂದಿರುವುದು ಮತ್ತು ಸಕಾರಣವಿಲ್ಲದೆ ದಂಡವನ್ನು ವಿಧಿಸಿರುವುದು ತತ್ಪರಿನಾಮ ಸ್ವರೂಪದಿಂದಾಗಿ ಗ್ರಾಹಕರ ಖಾತೆಗೆ ಅನಾವಶ್ಯಕವಾಗಿ ಬಾಕಿ ಬೆಳೆದಿರುವುದು ಕಂಡುಬರುತ್ತದೆ. ಅದಲ್ಲದೇ ಜೂನ್-2015 ರ ನಂತರ ಸ್ಥಾವರ ಬಳಕೆಯಲ್ಲಿ ಇಲ್ಲ ಎಂಬ ಕಾರಣಕ್ಕೆ Demand Stop ಮಾಡಲಾಗಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ.), ರವರು ಹೇಳಿಕೆ ನೀಡಿದ್ದು ಇರುತ್ತದೆ. ಅರ್ಜಿದಾರರ ಪ್ರತಿನಿಧಿ ನೀಡಿರುವ ದೂರಿನಲ್ಲಿ ತಿಳಿಸಿರುವ ವಿಷಯವನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ.) ರವರ ಲಿಖಿತ ಹೇಳಿಕೆ ಮತ್ತು ಸ್ಥಾವರದ consumer history statement ನ್ನು ತುಲನೆ ಮಾಡಿ ನೋಡಿದಾಗ ಸದರಿ ಸ್ಥಾವರಕ್ಕೆ ಅನಗತ್ಯವಾಗಿ Fictitious demand ಆಕರಿಸಿರುವುದು ದೃಡಪಡುತ್ತದೆ. ಆದ್ದರಿಂದ ಸದರಿ ಸ್ಥಾವರಕ್ಕೆ ಅನಗತ್ಯವಾಗಿ ಆಕರಣೆಯಾದ ಸುಳ್ಳುಬೇಡಿಕೆ ಮೊತ್ತ ರೂ. 7214/- ನ್ನು ಖಾತೆಯಿಂದ ಹಿಂಪಡೆಯುವುದು ಹೆಚ್ಚು ಸೂಕ್ತ ಎಂಬ ಅಭಿಪ್ರಾಯಕ್ಕೆ ಬರಲಾಯಿತು.

Scanned By Camera Scanner

D:\My Document Filles\Assistant-2 (Rev)\CGRF\CGRF Procedings Order-16.01.2018.doc

ಆದೇಶ ಸಂಖ್ಯೆ ವಿಪಾ/ವಿಗ್ರಾವೇ/ಪ್ರಕರಣ ಸಂಖ್ಯೆ-01/18-19/ 9628-38 ದಿನಾಂಕ: 14-01-2019

## :: ಆದೇಶ ::

ಪೀಠಿಕೆಯಲ್ಲಿ ಪ್ರಸ್ತಾಪಿಸಿದಂತೆ ಶ್ರೀ. ಜಿ. ಎಂ. ಮಲ್ಲಿಕಾರ್ಜುನಮಠ, ಜೋರಾಪುರ ಪೇಠ, ವಿಜಯಪೂರರವರ ಸ್ಥಾವರ ಸಂಖ್ಯೆ: 2206 ಇದಕ್ಕೆ ಅನಗತ್ಯವಾಗಿ ಆಕರಿಸಲಾಗಿರುವ Fictitious demand ಮೊತ್ತ ರೂ. 7214/- ನ್ನು (ರೂ. ಏಳು ಸಾವಿರದಾ ಎರಡು ನೂರಾ ಹದಿನಾಲ್ಕು ಮಾತ್ರ) ಸದರಿ ಸ್ಥಾವರದ ಖಾತೆಯಿಂದ ಹಿಂಪಡೆಯಲು ಈ ಮೂಲಕ ಆದೇಶಿಸಲಾಗಿದೆ.

| | | |
|---|---|---|
| ಶ್ರೀ. ಎಸ್. ಎಸ್. ಬಿರಾದಾರ,<br>ಸದಸ್ಯರು,<br>ವಿ.ಗ್ರಾ.ಕು.ಕೊ.ನಿ.ವೇ<br>ವಿಜಯಪೂರ. | 14/1/2019<br>ಶ್ರೀ. ಎಸ್. ಎ. ಸಿಂಧೂರ,<br>ಉಪಲೆಕ್ಕನಿಯಂತ್ರಣಾಧಿಕಾರಿ ಮತ್ತು<br>ಸದಸ್ಯರು,<br>ವಿ.ಗ್ರಾ.ಕು.ಕೊ.ನಿ.ವೇ ವಿಜಯಪೂರ, | ಶ್ರೀ. ಜಿ. ಬಿ. ಹೂಲವರ,<br>ಅಧೀಕ್ಷಕ ಅಭಿಯಂತರರು(ವಿ) ಮತ್ತು<br>ಅಧ್ಯಕ್ಷರು,<br>ವಿ.ಗ್ರಾ.ಕು.ಕೊ.ನಿ.ವೇ ವಿಜಯಪೂರ. |

<u>ಪ್ರತಿಯನ್ನು ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.</u>

1) ಮುಖ್ಯ ಇಂಜನೀಯರರು (ವಿ.), ಕಾ ಮತ್ತು ಪಾ ವಲಯ ಕಚೇರಿ ಹು.ವಿ.ಸ.ಕಂ.ನಿ ಬೆಳಗಾಂವಿ-10.

<u>ಪ್ರತಿಗಳು:</u>

2) ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾ.ಸಂ.ಅ), ನಿಗಮ ಕಚೇರಿ ಪಿ. ಬಿ. ರೋಡ, ನವನಗರ ಹೆಸ್ಕಾಂ ಹುಬ್ಬಳ್ಳಿ-25 ರವರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು (ವಿ.) (Regulatory Affairs) ನಿಗಮ ಕಚೇರಿ ಪಿ. ಬಿ. ರೋಡ ನವನಗರ ಹೆಸ್ಕಾಂ ಹುಬ್ಬಳ್ಳಿ-25 ರವರ ಮಾಹಿತಿಗಾಗಿ..
4) ಆಪ್ತ ಕಾರ್ಯದರ್ಶಿಗಳು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಚೇರಿ ಪಿ. ಬಿ. ರೋಡ ನವನಗರ ಹೆಸ್ಕಾಂ ಹುಬ್ಬಳ್ಳಿರವರ ಆದ್ಯ ಗಮನಕ್ಕೆ ತರುವುದು.
5) ಲೆಕ್ಕಾಧಿಕಾರಿ (ಅಂ.ಪ), ಕಾರ್ಯ ಮತ್ತು ಪಾಲನೆ ವೃತ್ತ ಹೆಸ್ಕಾಂ, ವಿಜಯಪೂರರವರ ಮಾಹಿತಿಗಾಗಿ.
6) ಕಾರ್ಯನಿರ್ವಾಹಕ ಅಭಿಯಂತರರು (ವಿ.), ಕಾರ್ಯ ಮತ್ತು ಪಾಲನೆ ವಿಭಾಗ ಹೆಸ್ಕಾಂ, ವಿಜಯಪೂರರವರ ಮಾಹಿತಿಗಾಗಿ.
7) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ.), ಕಾರ್ಯ ಮತ್ತು ಪಾಲನೆ ಶಹರ ಉಪವಿಭಾಗ-1 ಹು.ವಿ.ಸ.ಕಂ.ನಿ., ವಿಜಯಪೂರ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ.
8) ಶ್ರೀ. ಎ. ಜಿ. ಮಲ್ಲಿಕಾರ್ಜುನಮಠ, ಮುನಿಶ್ವರ ನಗರ ಸಿಂದಗಿ ರಸ್ತೆ,. ವಿಜಯಪೂರರವರ ಮಾಹಿತಿಗಾಗಿ.

Scanned By Camera Scanner